ಕೇವಲ ಎರಡು ಪಾತ್ರಗಳು, ನೀವು ಊಹಿಸಿದಂತೆ ಒಂದು ಗಂಡು, ಒಂದು ಹೆಣ್ಣು. ಗಂಡಿನ ಚಹರೆ ಬಹುತೇಕ ಹೀಗಿದೆ. ವಯಸ್ಸು ಇಪ್ಪತ್ತೈದು. ಆರಡಿ ಎತ್ತರ. ದಪ್ಪ ಮೀಸೆ, ಬಣ್ಣದಂಗಿಗೆ ಹೊಂದುವ ಜೀನ್ಸುಪ್ಯಾಂಟು. ಓಡಾಟಕ್ಕೊಂದು ದ್ವಿಚಕ್ರ. ಉದ್ಯೋಗ ಮತ್ತು ಕುಟುಂಬದ ಇತರ ವಿವರ ಗೊತ್ತಿಲ್ಲ.

ಹೆಣ್ಣಿನ ಗುಣಲಕ್ಷಣಗಳು ಮೇಲ್ನೋಟಕ್ಕೆ ಹೀಗಿವೆ. ವಯಸ್ಸು ಇಪ್ಪತ್ತೊಂದು. ಇಂಜಿನಿಯರಿಂಗ್ ಓದುತ್ತಿದ್ದಾಳೆ. ಐದಡಿ ನಾಲ್ಕು ಇಂಚು ಎತ್ತರ, ಆಕಾಶ ನೀಲಿ ಬಣ್ಣದ ಸೀರೆ, ಮಿಡಿ ಉಡುತ್ತಾಳೆ. ಒಮ್ಮೊಮ್ಮೆ ಜೀನ್ಸ್ ಹಾಕಿ ತಿರುಗುತ್ತಾಳೆ. ಹುಡುಗಿ ನೋಡುವುದಕ್ಕೆ ಹೇಗಿದ್ದಾಳೆ ಗೊತ್ತಿಲ್ಲ. ನಿಜಕ್ಕೂ ಗೊತ್ತಿಲ್ಲ, ಏಕೆಂದರೆ ಕಥೆಯ ತುಡಿತ ಕೂಡಾ ಇಲ್ಲಿಯೇ.

ಮರೆತ ಮಾತು:

ಕಥೆಯ ಹೀರೋ ಗಂಡು ಒಬ್ಬ ಕಥೆಗಾರ. ಹಿರೋಯಿನ್ ಹೆಣ್ಣು ಅಭಿಮಾನಿ ಓದುಗ ಪೈಕಿ ಒಬ್ಬಳು.

ಇಷ್ಟು ಹಿನ್ನೆಲೆ ಅಥವಾ ಟಿಪ್ಪಣಿಗಳೊಂದಿಗೆ ನಾವು ಕಥೆಗೆ ತೊಡಗೋಣ.

ಒಮ್ಮೆ ಏನಾಯ್ತು ಎಂದರೆ, ಕಥೆಗಾರ ಗಂಡು ಒಂದು ಕಥೆ ಬರೆದ. ಕಥೆ ಬರೆದು ಸುಮ್ಮನಿರಬಹುದಿತ್ತು. ಎಷ್ಟು ಜನ ಇರುವುದಿಲ್ಲ. ಇವನೂ ಹಾಗೆ ಇರಬಹುದಿತ್ತು. ಯಾಕೋ ಪತ್ರಿಕೆಗೆ ಕಳುಹಿಸಿದ. ಪತ್ರಿಕೆಯವರು ಸುಮ್ಮನಿರಬಹುದಿತ್ತು. ಚೆನ್ನಾಗಿಲ್ಲವೆಂದು ಬಿಸುಟಬಹುದಿತ್ತು. ಸಾಕಷ್ಟು ಅಂಚೆಚೀಟಿ ಇಡುತ್ತಿದ್ದರೆ ಮರಳಿಸಬಹುದಿತ್ತು. ಇದು ಯಾವುದನ್ನೂ ಮಾಡದ ಸಂಪಾದಕರು ಅದನ್ನು ಪ್ರಕಟಿಸಿದರು. ಕಥೆ ಪ್ರಕಟವಾಯಿತು. ಅಷ್ಟೇನೂ ಮಹತ್ವದ ಸಂಕೀರ್ಣ ಕಥೆಯಲ್ಲ. ಸಣ್ಣ ಕಥೆ, ಸರಳ ಸುಂದರ ಕಥೆ, ಒಬ್ಬಾಕೆ ಚೆಲುವೆಯ ಸುತ್ತ ಸುತ್ತುವ ಕಥೆ. ಆಕೆಯನ್ನು ಪ್ರೀತಿಸಲು ಹಲವಾರು ಮಂದಿ ಯತ್ನಿಸಿ ಸೋತದ್ದು ವಸ್ತು.

ನಮ್ಮ ಕಥೆ ಅಂದರೆ ನೀವೀಗ ಓದುತ್ತಿರುವ ಈ ಕಥೆ ಆರಂಭಗೊಳ್ಳುವುದು ಇಲ್ಲಿಂದ. ಕಥೆಗಾರ ಅಡ್ಡಾದಿಡ್ಡಿಯಾಗಿ ಬೆಚ್ಚಿ ಬೀಳುವಂತೆ ಅವನಿಗೆ ಪತ್ರಗಳು ಬರತೊಡಗಿದವು. ಎಲ್ಲವೂ ಮೆಚ್ಚುಗೆಯ ಪತ್ರಗಳು. ಉತ್ತಮ ಕಥೆ, ಸರಳ ನಿರೂಪಣೆ, ವಿಶಿಷ್ಟ ಅಂತ್ಯ ಇತ್ಯಾದಿ. ಅಭಿಮಾನಿಗಳ ಮಹಾಪೂರ. ಗೊತ್ತಿಲ್ಲದ, ಗುರುತಿಲ್ಲದ ಮುನ್ನೂರು ಮಂದಿ ಎಲ್ಲೆಲ್ಲಿಂದ ಬರೆದಿದ್ದರು. ಎಲ್ಲರೂ ಉತ್ತರಕ್ಕಾಗಿ ಕಾಯುವವರೇ. ನಮ್ಮ ಕಥೆಗಾರ ಹುಡುಗ ಸರಳ. ಭಾವುಕ ಹುಡುಗ. ಏಕಾಂತ, ಮೌನ ಅವನಿಗೆ ಇಷ್ಟ. ಆದ್ದರಿಂದ ಪತ್ರಗಳಲ್ಲಿ ಮೂಡಿ ಬಂದವರೆಲ್ಲಾ ಅವನ ಜಗತ್ತಿಗೆ ಬಂದು ಹೆಗಲಿಗೆ ಕೈ ಹಾಕಿದ ಗೆಳೆಯರಂತಾದರು. ಯಾರಿಗೆ ಏನೆಂದು ತಿಳಿಸುವುದೆಂದು ಗೊತ್ತಾಗದೆ ಕುಳಿತ. ಅಭಿಮಾನಿಗಳು ಮತ್ತೆ ಮತ್ತೆ ಬರೆದರು. ಆಗಲೂ ತೆಪ್ಪಗೆ ಕುಳಿತ. ಯಾರೋ ಕೇಳಿದಾಗ ಮಾಲಾಶ್ರೀಗೆ ದಿನಕ್ಕೆರಡು ಸಾವಿರ ಪತ್ರ ಬರುತ್ತಂತೆ ಎಂದ. ಅವಳಂತೆ ತನಗೂ ಎಲ್ಲರಿಗೆ ಉತ್ತರಿಸುವುದು ಸಾಧ್ಯವಿಲ್ಲ ಎಂಬ ಧಾಟಿ, ಹೋಲಿಕೆ ಅವನದ್ದು.

ಅಸಲು ಕಥೆಗಾರ ತುಂಬಾ ಕರಾರುವಾಕ್ಕಾದ, ಲೆಕ್ಕಾಚಾರದ ಹುಡಗನಾಗಿದ್ದ. ಯಾವುದೇ ವ್ಯವಹಾರದಲ್ಲಿ ಕುಶಲಿಗನಾಗಿದ್ದ. ಮುನ್ನೂರು ಅಭಿಮಾನಿಗಳಿಗೆ ಏನಿದ್ದರೂ ಇನ್ನೂರು ರೂಪಾಯಿ ಖರ್ಚಾಗುವ ಲೆಕ್ಕ ಅವನ್ನಲ್ಲಿತ್ತು. ಹೋಗಿ ಹೋಗಿ ಕಥೆಗೆ ಸಿಕ್ಕುವುದು ನೂರೈವತ್ತು ರೂಪಾಯಿ...

ಇದೆಲ್ಲ ಸರಿ. ಹಾಗೆ ಹೇಳುತ್ತಿದ್ದರೆ ಕಥೆಗೆಲ್ಲಿಯ ಜಾಗ? ಆದ್ದರಿಂದ ಕೊಂಚ ರಾಜಿ ಮಾಡಿಕೊಳ್ಳೋಣ. ಮುನ್ನೂರು ಪತ್ರಗಳಲ್ಲಿ ಒಂದು ಪತ್ರಕ್ಕೆ ಮಾತ್ರ ಉತ್ತರಿಸುವುದಾಗಿ ಹುಡುಗ ನಿಶ್ಚಯಿಸಿಕೊಂಡ. ಅದು ಈ ಕಥೆಯ ಇನ್ನೊಂದೇ ಪಾತ್ರವಾದ ಇಂಜಿನಿಯರಿಂಗ್ ಹುಡುಗಿಯ ಪತ್ರ.

ಈಕೆಯ ಪತ್ರವನ್ನೇ ಕಥೆಗಾರ ಹುಡುಗ ಏಕೆ ಆಯ್ದುಕೊಂಡ ಎಂಬ ಬಗ್ಗೆ ಸ್ವಲ್ಪ ವಿವರಣೆ